ಶ್ರೀ ಕೆ. ನಾಗಪ್ಪ ಆಳ್ವ.—ಹೆಚ್ಚು ಜನ ಸಂಖ್ಯೆ ಇರುವ ಪಟ್ಟಣಗಳಲ್ಲಿ ನಾನಾಗಲೇ ಹೇಳಿದಂತೆ ಕಾರ್ಯಕ್ರಮ ನಡೆಯುತ್ತದೆ, ಸೊಳ್ಳೆಯ ಹತೋಟಿ ಕಾರ್ಯಕ್ರಮ ನಡೆಯುತ್ತದೆ. ಸಣ್ಣ ಊರು ಗಳಲ್ಲಿ ತೆಗೆದುಕೊಂಡರೆ ಸರ್ಕಾರ ಸಹಾಯ ಮಾಡುತ್ತದೆ. ಮೂರನೆಯ ಒಂದು ಭಾಗ ಹಣದ ರೂಪದಲ್ಲಿ, ಬಾಕಿಯದನ್ನು ಅದಕ್ಕೆ ಬೇಕಾದ ಎಣ್ಣೆ ಮುಂತಾದ ನುಕರಣೆಯ ರೂಪದಲ್ಲಿ ಕೊಡುತ್ತೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಅನೇಕಾಲು ರೋಗದಿಂದ ಇದುವರೆಗೆ ಅಲ್ಲಿ ಎಷ್ಟು ಜನರು ನತ್ತಿದ್ದಾರೆ?

ಶ್ರೀ ಕೆ. ನಾಗಪ್ಪ ಆಳ್ವ.—ಮಾನ್ಯ ಸದಸ್ಯರಿಗೆ ಆನೆಕಾಲು ರೋಗದ ವಿಷಯ ಗೊತ್ತಿಲ್ಲವೆಂದು ಕಾಣುತ್ತದೆ. ಇದರಲ್ಲಿ ಸಾಯುವವರ ಪ್ರಶ್ನೆ ಬರುವುದಿಲ್ಲ. Disfigurement and suffering ಇರುತ್ತದೆ.

Land released from State Forest Areas for agricultural purposes during 1961-62 and 1962-63.

*Q.—99. Sri S. KARIAPPA (Kanakapura).—

Will the Government be pleased to state :—

(*a*) the extent of land released from State Forest areas for agricultural purposes during the year 1961-62 and 1962-63 (the names of forest, Taluk and the extent in each case should be given);

(*b*) the pendency of records in respect of release of lands from the State Forest for agriculture (Taluk, forest and area may be mentioned);

(*c*) the duration of pendency and the stage at which they stand at present (details regarding taluk, forest and area may be given in each case?)

*A.—Sri B. RACHAIAH (Minister for Forests and Fisheries).—

(*a*) *Vide* statement 'A' placed on the Table of the House.

(*b*) *Vide* statement 'B' placed on the Table of the House.

(*c*) *Vide* statement 'B' placed on the Table of the House.

ಶ್ರೀ ಎಸ್. ಕರಿಯಪ್ಪ.—ಫಾರೆಸ್ಟ್ ಜಮೀನನ್ನು ವ್ಯವಸಾಯಕ್ಕೆ ಕೊಡಬೇಕೆಂದು ಕೇಳುತ್ತಾರೆ, ಆಗ ಕೊಡಬೇಕೆಂದು ತೀರ್ಮಾನ ಕೈಕೊಳ್ಳುವ ಮುನ್ನ ಫಾರೆಸ್ಟ್ ಇಲಾಖೆಯವರು ಯಾವ ಯಾವ ವಿಷಯವನ್ನು ಗಮನಕ್ಕೆ ತೆಗೆದು ಕೊಳ್ಳುತ್ತಾರೆ?

ಶ್ರೀ ಬಿ. ರಾಚಯ್ಯ.—ನ್ಯಾಷನಲ್ ಪಾಲಸಿಯ ಪ್ರಕಾರ ಶೇಕಡ 33⅓ ರಷ್ಟು ಅರಣ್ಯ ಪ್ರದೇಶ ವಿರಬೇಕೆಂದು ತೀರ್ಮಾನವಾಗಿದೆ. ಇದನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಮುಂದೆ ಆ ಜಮೀನು ಕಾಡನು, ಬೆಳೆಸಲು ಯೋಗ್ಯವೆ ಎಂದು ನೋಡುತ್ತೇವೆ; ಆ ಜಮೀನು ನೀರಾವರಿಯಾಗಿ ವ್ಯವಸಾಯ ಮಾಡಲು ಸಾಧ್ಯವೆ ಎಂದು ನೋಡುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ.—ಮಾಗಡಿಯಲ್ಲಿ ಸರ್ವೆ ನಂ. 19ರ ಬಗ್ಗೆ ಮೇ 1959ರಲ್ಲಿ ಕೊಟ್ಟ ಅರ್ಜಿ ಇನ್ನೂ ಪೆಂಡಿಂಗ್ ಆಗಿದೆ, ಅದೇ ಸರ್ವೆ ನಂಬರ್ 29ರಲ್ಲಿ ರೈತರಿಗೆ ಜಮೀನು ಕೊಟ್ಟಿದ್ದಾರೆ, ಈಚೆಗೆ ಐದಾರು ಜನರಿಗೆ ಕೊಟ್ಟಿದ್ದಾರೆ, ಯಾವಾಗ ಸ್ಟೇಟ್ ಫಾರೆಸ್ಟ್‌ಗೆ ಸೇರಿತು?

ಶ್ರೀ ಬಿ. ರಾಚಯ್ಯ.—ಸ್ಟೇಟ್ ಫಾರೆಸ್ಟ್‌ಗೆ ಸೇರಿಲ್ಲ. ರೆವಿನ್ಯೂ ಇಲಾಖೆಯವರು Land Revenue Indexನ್ನು ಕೆಲವು ಗ್ರಾಮಗಳಲ್ಲಿ up-to-date ಮಾಡದಿರುವುದರಿಂದ ಇಂಥ ತೊಂದರೆ ಬರುತ್ತಿದೆ.

ಶ್ರೀ ಎಸ್. ಕರಿಯಪ್ಪ.—ಹಳ್ಳಿಗಾಡಿನ ಜನರಿಗೆ ಕೂಲಿ ವಗೈರೆ ಸಿಕ್ಕದೆ ಜೀವನ ಮಾಡುವುದೇ ಕಷ್ಟವಾಗಿರುವುದರಿಂದ ಜಮೀನಿಲ್ಲದವರಿಗೆ ಅರಣ್ಯದ ಜಮೀನನ್ನಾದರೂ ಕೊಟ್ಟರೆ ನಿರುದ್ಯೋಗ ಸಮಸ್ಯೆಯು ಹಳ್ಳಿಗಾಡಿನಲ್ಲಿ ನಿವಾರಣೆಯಾಗುವುದಿಲ್ಲವೆ?

ಶ್ರೀ ಬಿ. ರಾಚಯ್ಯ.—ಅರಣ್ಯದಲ್ಲಿ, ರೆವೆನ್ಯೂ ಇಲಾಖೆ ಮುಂತಾದ ಇಲಾಖೆಗಳಿಗೆ ಸಂಬಂಧ ಪಟ್ಟ ಪ್ರದೇಶಗಳಲ್ಲಿ ಉತ್ಕೃಷ್ಟವಾದ ಜಮೀನೆಷ್ಟಿದೆ, ನೀರಾವರಿಯಾಗುವಂಥಾದ್ದೆಷ್ಟಿದೆ ಎಂದು ನೋಡಿ ಒಂದು ಪಟ್ಟಿ ಮಾಡಿ ಸರ್ಕಾರಕ್ಕೆ ಕೊಡಬೇಕೆಂದು ಡಿಸ್ಟ್ರಿಕ್ಟ್ ಫಾರೆಸ್ಟ್ ಅಫೀಸರು, ಸಬ್ ಡಿವಿಜ಼ನ್ ಅಫೀಸರು, ತಾಲ್ಲೂಕ್ ಬೋರ್ಡ್ ಥೇರ್ಮನ್, ಅಸಿಮರ್ ಹಸ್ಬೆಂಡ್ರಿಗೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಎಕ್ಸೈಜ಼್ ಅಧಿಕಾರಿಗಳು, ಇವರನ್ನೊಳಗೊಂಡ ಒಂದು ಸಮಿತಿ ಮಾಡಿ ಆ ಸಮಿತಿಗೆ ತಿಳಿಸಿದ್ದೇವೆ. ಆ ಸಮಿತಿಯವರು ಕೂಲಂಕಷವಾಗಿ ಪರಿಶೀಲಿಸಿ ಪ್ರತಿ ತಾಲ್ಲೂಕಿನಲ್ಲೂ ಅರಣ್ಯಕ್ಕೆ ಯಾವ ಪ್ರದೇಶವನ್ನು ವರ್ಗಾವಣೆ ಮಾಡಬೇಕು, ಯಾವುದನ್ನು ಏರೇವಾರಿ ಮಾಡಬಹುದು ಎಂದು ಶಿಫಾರ್ಸು ಮಾಡುತ್ತಾರೆ.

ಶ್ರೀ ಆರ್. ಎಚ್. ಲಕ್ಷ್ಮೀಪತಿ.—ಫಾರೆಸ್ಟ್ ಇಲಾಖೆಯ ಜಮೀನನ್ನು ರೆವೆನ್ಯೂ ಇಲಾಖೆಯು ರೈತರಿಗೆ ಕೊಟ್ಟು 8–10 ವರ್ಷಗಳಾದರೆ ಅದನ್ನು ರೈತರಿಗೆ ಖಾಯಂ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಅದೆಲ್ಲವನ್ನೂ ಪರಿಶೀಲಿಸಿ ಶಿಫಾರ್ಸು ಮಾಡಲು ಒಂದು ಸಮಿತಿಯನ್ನು ನೇಮಿಸಿದೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಈಗ ಕೆಲವು ಫಾರೆಸ್ಟ್ ಜಮೀನುಗಳನ್ನು ವ್ಯವಸಾಯಕ್ಕೆ ಕೊಡುವುದನ್ನು ಖಾಯಂಮಾಗಿ ಕೊಡುತ್ತೀರಾ ಅಥವಾ ಹೇಗೆ ಕೊಡುತ್ತೀರಿ ?

ಶ್ರೀ ಬಿ. ರಾಚಯ್ಯ.—ಈಗ ಕೆಲವು ಕಡೆ ನಾರ್ ಏಲಿಯನೇಷ್ ಸ್ಕೀಂ ಇದೆ. ಕೆಲವು ಕಡೆ ರೆವೆನ್ಯೂ ಇಲಾಖೆಗೆ ರೀಲೀಸ್ ಮಾಡುತ್ತೇವೆ, ಫಾರೆಸ್ಟ್ ಸೆಟ್ಲ್‌ಮೆಂಟ್ ಅಫೀಸರು ಕೆಲವನ್ನು ಹಂಚುತ್ತಾರೆ. ರೆವೆನ್ಯೂ ಇಲಾಖೆಗೆ ವಹಿಸುವುದನ್ನು ಆ ಇಲಾಖೆಯವರು ದರಖಾಸ್ತು ರೂಲ್ಸ್ ಪ್ರಕಾರ ಹಂಚುತ್ತಾರೆ.

ಶ್ರೀ ಇ. ನಾರಾಯಣ ಗೌಡ.—ಕೆಲವು ಗ್ರಾಮ ಪಂಚಾಯಿತಿಗಳು ಜವಾಬ್ದಾರಿಯನ್ನು ವಹಿಸಿಕೊಂಡರೆ ಅವರಿಗೆ ಫಾರೆಸ್ಟ್ ಇಲಾಖೆಯಿಂದ ಜಮೀನನ್ನು ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಈಗಾಗಲೆ ಕೆಲವು ಕಡೆ ನೋಡಿದಂತೆ ಅದು ಯಶಸ್ವಿಯಾಗುವುದಿಲ್ಲವೆಂದು ಕೆಲವು ಸದಸ್ಯರು ಹೇಳಿದ್ದಾರೆ. ಚೆನ್ನಾಗಿ ಕೆಲಸ ಮಾಡುವ ಗ್ರಾಮ ಪಂಚಾಯಿತಿಯಾದರೆ ಯೋಚನೆ ಮಾಡಬಹುದು.

ಶ್ರೀ ಎಸ್. ಪಿ. ಹಾಯದೆ.—ಈಗ ಫಾರೆಸ್ಟ್ ಇಲಾಖೆಯಿಂದ ರಿಲೀಸ್ ಮಾಡಿರುವ ಜಮೀನು ವ್ಯವಸಾಯಕ್ಕೆ ರಾಯಕ್ಕಾಗಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಅದಕ್ಕೆ ವರದಿ ತರಿಸಿ ನೋಡುತ್ತೇವೆ.

Smt. VASANTALATA V. MIRJANKAR.—Is the Government aware that the area released prior to 1959 still remains to be disposed of and whether Government has called for a report in this behalf ?

Sri B. RACHIAH.—To an earlier question, I have already answered in such cases one Forest Settlement officer has been appointed to allot land distribute the same early.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಗುಂಡ್ಲುಪೇಟೆ ತಾಲ್ಲೂಕು ನಾರಣಾಪುರ, ಎಡವಿ ಮೊದಲಾದ ಗ್ರಾಮಗಳಲ್ಲಿ ಎಷ್ಟು ಎಕರೆಗಳನ್ನು ರಿಲೀಸ್ ಮಾಡಿದೆ ?

ಶ್ರೀ ಬಿ. ರಾಚಯ್ಯ.—ಆ ತಾಲ್ಲೂಕಿನಲ್ಲಿ ಈ ಎರಡು ವರ್ಷಗಳಲ್ಲಿ ಅಂದರೆ 1961–62 ಮತ್ತು 1962–63 ರಲ್ಲಿ ಯಾವುದೂ ರಿಲೀಸ್ ಮಾಡಿಲ್ಲ.

ಶ್ರೀ ಕೆ. ಲಕ್ಕಪ್ಪ.—ಕೆಲವು ಫಾರೆಸ್ಟ್ ಜಮೀನುಗಳಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರುವುದು ಗಮನಕ್ಕೆ ಬಂದಿದೆಯೇ ? ಅವರಿಗೇನು ಮಾಡುತ್ತೀರಿ ?

ಶ್ರೀ ಬಿ. ರಾಚಯ್ಯ.—ಕಾನೂನು ಪಾಲನೆ ಮಾಡುವವರಿಗೆ, ಯೋಗ್ಯರಾದವರಿಗೆ ಮಾತ್ರ ಪ್ರೋತ್ಸಾಹ ಕೊಡುತ್ತೇವೆ. ಬಗರ್ ಹುಕುಂ ಸಾಗುವಳಿ ಮಾಡುವವರಿಗೆ ಖಾಯಂ ಮಾಡಬೇಕೆಂದರೆ ನಾವು ಇರಬೇಕಾದ ಅವಶ್ಯಕತೆಯೇ ಇಲ್ಲ.

ಶ್ರೀ ಎಂ. ಎಸ್. ಕೃಷ್ಣಸಿಂಗ್.—ಅರ್ಜಿ ಕೊಟ್ಟ ಇಷ್ಟು ವರ್ಷಗಳೊಳಗೆ ಜಮೀನು ಕೊಡಬೇಕೆಂದು ನಿಗದಿ ಮಾಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ಆ ಉದ್ದೇಶದಿಂದಲೇ ಸಮಿತಿಯು ಅದಷ್ಟು ಬೇಗ 3 ತಿಂಗಳೊಳಗಾಗಿ ವರದಿ ಸಲ್ಲಿಸಬೇಕೆಂದು ತಿಳಿಸಲಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—33⅓ ಭಾಗ ಅರಣ್ಯ ಪ್ರದೇಶವಿರಬೇಕು, ಅಷ್ಟನ್ನು ಉಳಿಸ ಬೇಕೆಂಬುದು ಆಲ್ ಇಂಡಿಯಾ ಪಾಲಿಸಿ ಎಂದು ಹೇಳಿದರು. ಒಟ್ಟು ರಾಜ್ಯವನ್ನು ತೆಗೆದುಕೊಂಡು ಹಾಗೆ ಮಾಡುತ್ತೀರೋ ಅಥವಾ ಡಿಸ್ಟ್ರಿಕ್ಟ್ ವಾರು ತೆಗೆದುಕೊಳ್ಳುತ್ತೀರೋ ?

ಶ್ರೀ ಬಿ. ರಾಚಯ್ಯ.—ಒಟ್ಟಿಗೆ ತೆಗೆದುಕೊಳ್ಳಬೇಕೆಂದಿದ್ದೇವೆ.

Unauthorised cultivation of gomal lands in Narasimharajapur Taluk in Chickmagalur District.

*Q.—467. Sri DAYANANDA R. KALLE (Karkal).—

Will the Government be pleased to state:—

(*a*) whether it has come to the notice of the Government that Gomal lands are used for unauthorised cultivation during the last six years in Narasimharajapura Taluk in Chickmagalur District;

(*b*) the extent of land so used for unauthorised cultivation;

(*c*) who are the people doing this unauthorised cultivation;

(*d*) whether it has come to the notice of the Government that this kind of unauthorised possession and cultivation is going on in a considerable scale in Malnad areas year by year;

(*e*) what action the Government have taken in this regard?

A.—Sri M. V. KRISHNAPPA (Minister for Revenue).—

(*a*) Yes.

(*b*) 798 acres 2 guntas.

(*c*) Mostly persons from the Kerala State who have migrated to Narasimharajapura Taluk. There are however some local people also who are in unauthorised occupation of such land.

(*d*) Yes.

(*e*) Action is being taken either to sanction the lands to the encroachers or to evict them according to rules.

ಶ್ರೀ ದಯಾನಂದ ಆರ್. ಕಳ್ಳೆ.—ಅನಧಿಕೃತ ಸಾಗುವಳಿ ಮಾಡಿರುವ ವಿಚಾರದಲ್ಲಿ ಏಳೆಂಟು ವರ್ಷಗಳಿಂದ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ.ವಿ. ಕೃಷ್ಣಪ್ಪ.—ಹೋದ ವರ್ಷ ಹೆಚ್ಚು ಜುಲ್ಮಾನೆ ಹಾಕಿ ಎವಿಕ್ಷನ್ ಆರ್ಡರು ಮಾಡಿದೆ. ಹೀಗೆ ರೂಲ್ಸ್ ಪ್ರಕಾರ ಕ್ರಮ ಕೈಕೊಂಡಿದೆ.

ಶ್ರೀ ದಯಾನಂದ ಆರ್. ಕಳ್ಳೆ.—ಎವಿಕ್ಷನ್ ಆರ್ಡರಾದರೂ ಇಲ್ಲಿಯವರೆಗೆ ಜಮೀನು ಬಿಟ್ಟಿಲ್ಲ, ಸ್ಟೇ ಆರ್ಡರ್ ತಂದಿದ್ದಾರೆ ಎಂಬುದು ಗೊತ್ತೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೋದ ಸೆಪ್ಟಂಬರಿನಲ್ಲೇ ಎವಿಕ್ಷನ್ ಆರ್ಡರು ಮಾಡಲಾಯ್ತು. ಆದರೆ ಆ ಪ್ರದೇಶದ ಅಸೆಂಬ್ಲಿ ಸದಸ್ಯರು, ಹಿಂದೆ ರೆವೆನ್ಯೂ ಮಂತ್ರಿಗಳಾಗಿದ್ದವರಲ್ಲಿ ಬಂದು "ನಾವು ಫೈನಲು ಮಾಡುತ್ತೇವೆ, ಆರ್ಡರನ್ನು ತಡೆಹಿಡಿಯಿರಿ" ಎಂದು ಹೇಳಿದ ಮೇಲೆ, ಜವಾಬ್ದಾರಿಯುತ ರಾದ ಅಂಥವರ ಭರವಸೆ ಮೇಲೆ ಆರ್ಡರನ್ನು ತಡೆಹಿಡಿದಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—On a point of order, Sir, ಅಸೆಂಬ್ಲಿಯ ಸದಸ್ಯರು ಮತ್ತು ಹಿಂದಿನ ಮಂತ್ರಿಗಳು ಹೇಳಿದ ಮಾತ್ರಕ್ಕೆ ತಡೆಹಿಡಿಯುವುದೆಂದರೆ ಇದೇನು ಸರ್ಕಾರವೋ ಅಥವಾ ಇನ್ನೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾವು ಎಷ್ಟೋನಲು ಹೇಳಿದರೂ ಸ್ಥಳದವರು ಬಂದು ಬಡವರಿಗೆ ನ್ಯಾಯವಾಗುತ್ತದೆ, ತಡೆಯಿರಿ ಎಂದು ಕೇಳಿಕೊಂಡರೆ ಏನು ಮಾಡುವುದು.